ದಿನಾಂಕ 09-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಜೆ ಎಸ್ ವಕೀಲರಿಂದಃ-

ನಾನು ರಾಮನಗರದ ಕಾನೂನು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದೇನೆ. ಅಪಘಾತದ ಕಾಲಕ್ಕೆ ನನಗೆ ಮಾಸಿಕ ಸಂಬಳ ಎಷ್ಟು ಇತ್ತು ಎಂದು ತೋರಿಸಲು ಪೇ ಸ್ಲಿಪ್ ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತವಾದದ್ದು 03.02.2024 ಎಂದರೆ ಸರಿ. 03.02.2024 ರಂದು ನನಗೆ ಇದ್ದ ಮಾಸಿಕ ಸಂಬಳದಷ್ಟೆ ಈಗಲೂ ಬರುತ್ತಿದೆ ಸಂಬಳ ಜಾಸ್ತಿ ಆಗಿಲ್ಲ. ಡಿ ಎ ಮಾತ್ರ ಜಾಸ್ತಿ ಆಗಿದೆ. ಅಪಘಾತವಾದ ಸ್ಥಳದಲ್ಲಿ ರಸ್ತೆಯಲ್ಲಿ ಫುಟ್ ಪಾತ್ ಇತ್ತು. ನಾನು ರಸ್ತೆಯ ಮಧ್ಯದಲ್ಲಿ ಹೋಗುತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿ ರಸ್ತೆಯ ಪೂರ್ತಿ ಎಡಭಾಗದಲ್ಲಿ ಹೋಗುತ್ತಿದೆ ಎಂದು ನುಡಿಯುತ್ತಾರೆ. ನಿಪಿ 4 ರ ಪ್ರಕಾರ ಅಪಘಾತ ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ನಾನು ನನ್ನ ಬೇಜವಬ್ದಾರಿಯಿಂದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅಪಘಾತ ಅಗಿತ್ತು ಎಂದರೆ ಸರಿಯಲ್ಲ. ದ್ವಿಚಕ್ರವಾಹನದ ಸವಾರ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದಾರೆ. ನಾನು ಪೊಲೀಸರಿಗೆ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ನೀಡಿದ್ದೇನೆ. ದೂರನ್ನು ನಾನೇ ಠಾಣೆಗೆ ಹೋಗಿ ಕೊಟ್ಟಿದ್ದೆನೆಂದರೆ ಸರಿಯಲ್ಲ. ಅಪಘಾತ ಪಡಿಸಿದ ಗಾಡಿಯ ನಂಬರ ನ್ನು ನಾನು ನೋಡಲು ಆಗಲಿಲ್ಲ. ನಾನು ಆಸ್ಪತ್ರೆಯಲ್ಲಿ ದ್ವಿಚಕ್ರವಾಹನದ ಸಂಖ್ಯೆಯನ್ನು ಹೇಳಿಲ್ಲ. ನನಗೆ ಅಪಘಾತ ಬೇರೆ ಯಾವುದೋ ವಾಹನದಿಂದ ಅಗಿದೆ ಎಂದರೆ ಸರಿಯಲ್ಲ. ನಾನು ಪೊಲೀಸರು ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೆಡಿಕಲ್ ರೀಎಂಬರ್ಸ್ ಮೆಂಟ್ ಇದೆ ಎಂದರೆ ಸಾಕ್ಷಿ ನಾನು ರಿಎಂಬರ್ಸ್ ಮೆಂಟ್ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೆ ಚಿಕಿತ್ಸೆ ನೀಡಿದ್ದ ವೈದ್ಯರನ್ನು ವಿಚಾರಣೆ ಮಾಡಿಸಲು ತೊಂದರೆ ಇಲ್ಲ. ನನಗೆ ಶಸ್ತ್ರ ಚಿಕಿತ್ಸೆಯಾಗಿದೆ. ಅದು ಮಜುಂದಾರ್ ಆಸ್ಪತ್ರೆಯಲ್ಲಿ. ನಾನು ಹಾಜರುಪಡಿಸಿರುವ ಎಲ್ಲಾ ಪ್ರತಿಗಳು ಜರಾಕ್ಸ್ ಪ್ರತಿಗಳು. ನಾನು ಮೆಡಿಕಲ್ ರೀಎಂಬರ್ಸ ಮೆಂಟ್ ಮಾಡಿಕೊಂಡಿದೆ

ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳು ಸೃಷ್ಟಿಸಿ ಹಾಜರುಪಡಿಸಿರುವ ಬಿಲ್ಲುಗಳು ಎಂದರೆ ಸರಿಯಲ್ಲ. ನನಗೆ ಆಸ್ಪತ್ರೆಗೆ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆಗಾಗಿ 8 ಲಕ್ಷ ಖರ್ಚಾಗಿದೆ ಎಂದು ಹೇಳುವುದು ಸುಳ್ಳು. ಫಿಜಿಯೋತೆರಿಪಿಗಾಗಿ 70 ಸಾವಿರ ಖರ್ಚು ಆಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಬೇಜವಾಬ್ದಾರಿಯಿಂದಲೇ ಅಪಘಾತವಾಗಿದ್ದು ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ದೈಹಿಕ ಆರ್ಥಿಕ ತೊಂದರೆ ಅಗಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.